

ಕಲೆ: ಗುರು ರಾಘವೇಂದ್ರ

# ಕಾವ್ಯಗಂಧದ ದಾರಿಯಲ್ಲಿ...

ಕನ್ನಡ ಕಾವ್ಯದ ಅತ್ಯುತ್ತಮ ಮಾದರಿಗಳನ್ನು ನೆನಪಿಸುವ 'ಪದ್ಯಪಲ್ಲವ' ಮಾಲಿಕೆ ಈ ಸಂಚಿಕೆಯಿಂದ ಆರಂಭಗೊಂಡಿದೆ. ಕಾವ್ಯಸೂಕ್ಷ್ಮಗಳನ್ನು ಅರಿತ ಹಿರಿಯ ಸಾಹಿತಿಗಳು ತಮ್ಮಿಷ್ಟದ ಕವಿತೆಯ ಕುರಿತು ಬರೆಯುವ ಈ ಮಾಲಿಕೆ, ಕಾವ್ಯಪ್ರೇಮಿಗಳಿಗೆ ರುಚಿಸಬಲ್ಲದು; ಯುವಕವಿಗಳಿಗೆ ಪಠ್ಯದ ರೀತಿಯಲ್ಲಿ ಮುಖ್ಯವಾಗಬಲ್ಲದು. ಇತ್ತೀಚಿನ ವರ್ಷಗಳಲ್ಲಿ ಮರೆವೆಗೆ ಸಂದ ಕನ್ನಡದ ಮುಖ್ಯ ಕವಿತೆಗಳ ಮರು ಓದಿಗೆ ಹಾಗೂ ಕಾವ್ಯವನ್ನು ಓದುವ ಸಾಧ್ಯತೆಗಳ ಅರಿವಿಗೆ ಪೂರಕವಾಗುವ ಆಶಯ 'ಪದ್ಯಪಲ್ಲವ' ಮಾಲಿಕೆಯದು. ಕಾವ್ಯದ ಜೀವಕೋಶಗಳಾದ ಗೇಯತೆ ಹಾಗೂ ಧ್ವನಿಶಕ್ತಿಯನ್ನು ಯುವಕವಿಗಳು ಅಭ್ಯಾಸ ಮಾಡಲಿಕ್ಕೆ 'ಪದ್ಯಪಲ್ಲವ' ಪೂರಕ ಆಗುತ್ತದೆನ್ನುವುದು 'ಮಯೂರ'ದ ನಂಬಿಕೆ. ಹಿರಿಯ ಲೇಖಕ ಅಗ್ರಹಾರ ಕೃಷ್ಣಮೂರ್ತಿ ಅವರ ಸಂದರ್ಶನ ಈ ಸಂಚಿಕೆಯ ಮತ್ತೊಂದು ವಿಶೇಷ. ಲೇಖಕರ ಸಂಕೋಚ ಹಾಗೂ ಮೆಲುಮಾತು ಸಂದರ್ಶನದಲ್ಲೂ ಕಾಣಿಸಿಕೊಂಡಿರುವುದನ್ನು ಓದುಗರು ಗಮನಿಸಬಹುದು.

'ಮಯೂರ' ಕಥನಪ್ರಧಾನ ಮಾಸಿಕ. ಪ್ರತಿ ಸಂಚಿಕೆಯೂ ಒಂದೊಂದು ಕಥಾಸಂಕಲನದಂತೆ ಕಥನಪ್ರಿಯರಿಗೆ ಕಾಣಿಸಿದರೆ ಆಶ್ಚರ್ಯವೇನಿಲ್ಲ. ಈ ಸಂಚಿಕೆಯಲ್ಲಿಯೂ ಕಥೆಗಳಿಗೆ ಹೆಚ್ಚಿನ ಆದ್ಯತೆ ದೊರೆತಿದೆ. ಆದರೆ, ವೈವಿಧ್ಯದ ದೃಷ್ಟಿಯಿಂದ ಈ ಕಥೆಗಳಿಗೆ ವಿಶೇಷ ಮಹತ್ವವಿದೆ. ಭಿನ್ನ ಸಂವೇದನೆ, ವಯೋಮಾನಗಳ ಕಥೆಗಾರರ ರಚನೆಗಳೊಂದಿಗೆ, ಅನುವಾದಿತ ರಚನೆಗಳೂ ಸೇರಿಕೊಂಡಿರುವುದು ಓದುಗರಿಗೆ ಸುಗ್ಗಿಯಂತಿದೆ.

**ಮಯೂರ ಬಳಗ**

**editormy@mayura.co.in**